## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್.ಸಿ. :15/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮಹೇಂದ್ರ | ಪ್ರಮಾಣ ಮಾಡಿದ ದಿನಾಂಕ |
| ತಂದೆ ಹೆಸರು | : | ಪುಟ್ಟಮಾದಶೆಟ್ಟಿ | **05.12.2023** |
| ವಯಸ್ಸು | : | 39 ವರ್ಷ | |
| ವೃತ್ತಿ | : | ವ್ಯವಸಾಯ | ಪಿ.ಡಬ್ಲೂಃ 1 |
| ವಾಸಸ್ಥಳ | : | ತಗಡೂರು, ನಂಜನಗೂಡು. | ಸಿ.ಡಬ್ಲೂಃ 1 |

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ನ್ಯಾಯಾಲಯದ ಮುಂದಿರುವ ಆರೋಪಿ ನನ್ನ ಸಂಬಂಧಿ ಆಗಬೇಕು. ಚಾಸಾ 2 ನನ್ನ ತಂದೆ. ಚಾಸಾ 3 ನನ್ನ ಮಾವ. ದಿಃ 15.06.2020 ರಂದು ಮಧ್ಯಾಹ್ನ 1 ಅಥವಾ 1.30 ಗಂಟೆ ಸಮಯದಲ್ಲಿ ನಾನು ಚಾಸಾ 2 ಮತ್ತು 3 ತಗಡೂರಿನಲ್ಲಿರುವ ಸ. ನಂ. 674/2/34 ವನಜಾಕ್ಷಿಯವರ ಜಮೀನಿನಲ್ಲಿ ಕೆಲಸ ಮಾಡುತ್ತಿರುವಾಗ, ಆರೋಪಿ ಬಂದು ನನ್ನನ್ನು ಮಾತನಾಡುವುದಿದೆ ಎಂದು ಹೇಳಿ ಅದೇ ಜಮೀನಿನಲ್ಲಿರಲುವ ಬಾಳೆಯ ತೋಟಕ್ಕೆ ಕರೆದುಕೊಂಡು ಹೋದ. ಆರೋಪಿ ನನ್ನೊಂದಿಗೆ ಅವನ ಹೆಂಡತಿಯೊಂದಿಗಿರುವ ಹಣಕಾಸಿನ ವ್ಯವಹಾರದ ಬಗ್ಗೆ ಮಾತನಾಡುತ್ತಾ ಗಲಾಟೆ ಮಾಡಿ ನನಗೆ ಮಚ್ಚಿನಿಂದ ಬಲ ಕಿವಿಯ ಕೆಳಗಡೆ ಹೊಡೆದ. ಆ ಹೊಡೆತಕ್ಕೆ ಗಾಯಗೊಂಡು ನಾನು ಅರೇ ಪ್ರಜ್ಞಾವಸ್ಥೆಯಲ್ಲಿದ್ದಾಗ ಆರೋಪಿ ನನಗೆ ಸಿಕ್ಕ ಕಡೆಯೆಲ್ಲಾ ಅದೇ ಮಚ್ಚಿನಿಂದ ಹೊಡೆದ. ನನ್ನ ಎಡಗೈ ಮಣಿಕಟ್ಟು , ಬಲಗೈ ಮುಂಗೈಗೆ , ಎದೆಗೆ ಹಾಗೂ ತಲೆಗೆ ಗಾಯಗಳಾಗಿದ್ದು, ಸಾಕ್ಷಿಯ ಎಡಗೈ, ಕಿವಿಯ ಕೆಳಗಡೆ ಹಾಗೂ ಬಲಗೈಯ ಮುಂಭಾಗದಲ್ಲಿ ಗಾಯದ ಗುರುತು ಕಾಣಿಸುತ್ತದೆ. ನನ್ನ ಚಾಸಾ 2 ಮತ್ತು 3 ರವರು ನನ್ನನ್ನು ಅಂಬೂಲೆನ್ಸ ನಲ್ಲಿ ನಂಜನಗೂಡಿನ ಸರ್ಕಾರಿ ಆಸ್ಪತ್ರೆಗೆ

ಕರೆದುಕೊಂಡು ಹೋದರು. ಹೆಚ್ಚಿನ ಚಿಕಿತ್ಸೆ ಗಾಗಿ ವೈದ್ಯರ ಸಲಹೆ ಮೆರೆಗೆ ಅಲ್ಲಿಂದ ನನ್ನನ್ನು ಮೈಸೂರಿನ ಕೆ ಆರ್ ಆಸ್ಪತ್ರೆಗೆ ದಾಖಲು ಮಾಡಿದರು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ಘಟನೆಯ ಮರುದಿನ ಪೊಲೀಸರು ಆಸ್ಪತ್ರೆಗೆ ಭೇಟಿ ಕೊಟ್ಟಾಗ ಘಟನೆ ಬಗ್ಗೆ ವಿಚಾರಿಸಿದಾಗ ನಾನು ತಿಳಿಸಿದೆ ಹಾಗೂ ಅವರು ಬರೆದ ದೂರಿಗೆ ಸಹಿ ಮಾಡಿದ್ದೇನೆ. ಈಗ ನಾನು ನೋಡುತ್ತಿರುವ ದಾಖಲೆ ಆ ದೂರು ಆಗಿದ್ದು ಅದನ್ನು ನಿಪಿ.–1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.–1 (ಎ) ಎಂದು ಗುರುತಿಸಲಾಯಿತು. ಅದಾದ 2 ದಿನಕ್ಕೆ ಪುನಃ ಪೊಲೀಸರು ಆಸ್ಪತ್ರೆಗೆ ಬಂದಿದ್ದರು. ಆಗ ನನ್ನನ್ನು ವಿಚಾರಿಸಿ ನನ್ನ ಮುಂದುವರೆದ ಹೇಳಿಕೆ ಪಡೆದುಕೊಂಡಿದ್ದಾರೆ.

2. ಆರೋಪಿ ನನಗೆ ಹೊಡೆಯಲು ಉಪಯೋಗಿಸಿದ ಮಚ್ಚನ್ನು ನೋಡಿದರೆ ಗುರುತಿಸುತ್ತೇನೆ. (ಸಾಕ್ಷಿಗೆ ಮಚ್ಚನ್ನು ತೋರಿಸುವ ಸಲುವಾಗಿ ತೆರೆದ ನ್ಯಾಯಾಲಯದಲ್ಲಿ ಸೀಲ್ ಕವರ್ ನ್ನು ತೆಗೆಯಲಾಯಿತು.) ಸಾಕ್ಷಿ ಮಚ್ಚನ್ನು ಗುರುತಿಸಿದ್ದು ಅದನ್ನು ಮು. ಮಾ. 1 ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ದಾಖಲೆ ನಾವು ಸಾಗುವಳಿ ಮಾಡುತ್ತಿದ್ದ ವನಜಾಕ್ಷಿಯವರ ಜಮೀನಿನ ಆರ್ ಟಿ ಸಿ ಆಗಿದ್ದು ಅದನ್ನು ನಿಪಿ. 2 ಎಂದು ಗುರುತಿಸಲಾಯಿತು. ಈ ಘಟನೆಯ ಬಗ್ಗೆ ನಂಜನಗೂಡು ನ್ಯಾಯಾಧೀಶರ ಮುಂದೆ ವಿಸಿ ಮುಖಾಂತರ ಹೇಳಿಕೆ ಕೊಟ್ಟಿದ್ದೇನೆ. (ಸಾಕ್ಷಿಗೆ ಹೇಳಿಕೆ ತೋರಿಸುವ ಸಲುವಾಗಿ ತೆರೆದ ನ್ಯಾಯಾಲಯದಲ್ಲಿ ಸೀಲ್ ಕವರ್ ನ್ನು ತೆಗೆಯಲಾಯಿತು.) ನನಗೆ ತೋರಿಸಿದ ದಾಖಲೆ ಹಾಗೆ ವಿಸಿ ಮೂಲಕ ಪಡೆದುಕೊಂಡು ನನ್ನ ಹೇಳಿಕೆ ಆಗಿದ್ದು ಅದನ್ನು ನಿಪಿ.– 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ.–3 (ಎ) ಎಂದು ಗುರುತಿಸಲಾಯಿತು.

3. ಆರೋಪಿ ನನ್ನ ಹಾಗೂ ಆರೋಪಿಯ ಹೆಂಡತಿಯ ಮಧ್ಯ ಸಂಬಂಧ ಇದೆ ಎನ್ನುವ ಕಾರಣಕ್ಕಾಗಿ ಆ ದಿನ ಗಲಾಟೆ ಮಾಡಿ ಹಲ್ಲೆ ಮಾಡಿದ. (ಸಾಕ್ಷಿಗೆ ಬಟ್ಟೆ ತೋರಿಸುವ ಸಲುವಾಗಿ ತೆರೆದ ನ್ಯಾಯಾಲಯದಲ್ಲಿ ಸೀಲ್ ಕವರ್ ನ್ನು ತೆಗೆಯಲಾಯಿತು.) ನನಗೆ ತೋರಿಸಿದ ಸ್ವೆಟರ್ ಆ ದಿನ ಆರೋಪಿ ಧರಿಸಿದ ಸ್ವೆಟರ್ ಆಗಿದೆ. ಅದನ್ನು ಮು. ಮಾ. 2 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಕೆ ಎಮ್ ಎನ್ ರವರಿಂದಃ</u>**

4. ಕಳೆದ 8-9 ವರ್ಷಗಳಿಂದ ವನಜಾಕ್ಷಿಯವರ ಜಮೀನನ್ನು ಗುತ್ತಿಗೆ ಮೆರೆಗೆ ಸಾಗುವಳಿ ಮಾಡುತ್ತಿದ್ದೇವೆ. ಆ ಜಮೀನಿನಲ್ಲಿ ವಾಸದ ಮನೆ ಇರುವುದಿಲ್ಲ, ನಾವು ಯಾರೂ ಅಲ್ಲಿ ವಾಸ ಮಾಡುತ್ತಿಲ್ಲ. ಘಟನೆ ನಡೆದಿದೆ ಎಂದು ಹೇಳಿದ ಸಮಯದಲ್ಲಿ 3 ಎಕರೆ ವಿಸ್ತೀರ್ಣದಲ್ಲಿ ಬಾಳೆ , 1 ಎಕರೆಯಲ್ಲಿ ಟೋಮೆಟೋ ಬೆಳೆ ಇತ್ತು. ಬಾಳೆ ಗೊಣೆ ಬಂದಿದ್ದು 10-15 ದಿನಗಳಲ್ಲಿ ಕಟಾವಿಗೆ ಬರುವುದಿತ್ತು. ಬಾಳೆಯ ಕಟಾವನ್ನು ಗುತ್ತಿಗೆ ಕೊಟ್ಟು ಖರೀದಿದಾರರೆ ಕಟಾವು ಮಾಡಿಕೊಂಡು ಹೋಗುತ್ತಾರೆ. ಬಾಳೆ ಕಟಾವುಗೆ ಆಗಲೇ ವ್ಯವಹಾರ ಆಗಿತ್ತು. ಆದರೆ ಬೇರೆಯವರೂ ಸಹ ಬಂದು ಕೇಳುತ್ತಿದ್ದರು ನಾವು ವ್ಯವಹಾರ ಆಗಿದೆ ಎಂದು ಹೇಳುತ್ತಿದ್ದೆವು. ಬಾಳೆಯ ತೋಟಕ್ಕೆ ಹನಿ ನೀರಾವರಿಯಿಂದ ನೀರು ಒದಗಿಸುತ್ತೇವೆ. 3 ಅಥವಾ 4 ದಿನಕ್ಕೊಮ್ಮೆ ನೀರು ಬಿಡುತ್ತಿದ್ದೆವು. ತೇವು ಆರದ ರೀತಿಯಲ್ಲಿ ನೀರನ್ನು ಬಿಡುತ್ತಿದ್ದೆವು. ಘಟನೆಯ ಹಿಂದಿನ ದಿನ ಬಾಳೆಯ ತೋಟಕ್ಕೆ ಹನಿ ನೀರಾವರಿ ಮೂಲಕ ನೀರು ಬಿಟ್ಟಿದ್ದೆವು.

5. ಆ ದಿನ ನನ್ನನ್ನು ಘಟನೆಯ ನಂತರ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಚಾಸಾ

2 ಮತ್ತು 3 ಅಲ್ಲದೆ ಬೇರೆಯವರೂ ಸಹ ಆಸ್ಪತ್ರೆಗೆ ಬಂದಿದ್ದರು. ನಾನು ಆಸ್ಪತ್ರೆ ತಲುಪಿದ್ದಾಗ ನನಗೆ ಅರೆ ಪ್ರಜ್ಞೆ ಇತ್ತು, ನನ್ನ ತಂದೆ ನನಗೆ ಹೇಗೆ ಗಾಯಗಳಾದವು ಎಂದು ವೈದ್ಯರಿಗೆ ಹೇಳಿದರು ಎಂದರೆ ನನಗೆ ಗೊತ್ತಿಲ್ಲ. ಮೈಸೂರಿನ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆದ ನಂತರ ನನ್ನ ಆರೋಗ್ಯ ಸುಧಾರಿಸಿತು , ಪ್ರಜ್ಞೆ ಬಂತು. ಪೊಲೀಸರು ಘಟನೆಯ ಮರುದಿನ ಅಂದರೆ ದಿಃ16.06.2020 ರಂದು ಆಸ್ಪತ್ರೆಗೆ ಬಂದರು. ಪೊಲೀಸರು ನನ್ನ ಹೇಳಿಕೆ ಪಡೆಯುವ ಸಮಯದಲ್ಲಿ ವೈದ್ಯರು ಇರಲಿಲ್ಲ ನರ್ಸ ಇದ್ದರು. ನಾನು ಹೇಳಿದಂತೆ ಪೊಲೀಸರು ಆಸ್ಪತ್ರೆಯಲ್ಲಿ ಬರೆದುಕೊಂಡಿದ್ದಾರೆ. ಓದಿ ನೋಡಿಸಿಕೊಂಡು ಸರಿ ಇದೆ ಎಂದು ಒಪ್ಪಿಕೊಂಡು ನಾನು ನಿಪಿ. 1 ಕ್ಕೆ ಸಹಿ ಮಾಡಿದ್ದೇನೆ. ಆ ದಿನ ಪೊಲೀಸರು ಸಂಜೆ 7.30 ಅಥವಾ 8.00 ಗಂಟೆ ಸಮಯದಲ್ಲಿ ಆಸ್ಪತ್ರೆಗೆ ಬಂದಿದ್ದರು. ಆ ದಿನ ನಿಪಿ. 1 ರ ಪ್ರಕಾರ ಹೇಳಿಕೆಯನ್ನು ಹೊರತು ಪಡಿಸಿ ಪೊಲೀಸರು ನನ್ನಿಂದ ಬೇರೆ ಹೇಳಿಕೆ ಪಡೆದಿಲ್ಲ. 2 ದಿನಗಳ ನಂತರ ಪುನಃ ನನ್ನ ಹೇಳಿಕೆ ಪಡೆದುಕೊಂಡಿದ್ದು, ನಿಖರವಾದ ದಿನಾಂಕ ನನಗೆ ನೆನಪಿಲ್ಲ. ಮೊದಲನೇಯ ದಿನದ ನನ್ನ ಹೇಳಿಕೆಯಲ್ಲಿ ಆರೋಪಿಯ ಹೆಸರನ್ನು ನಾನು ಹೇಳಿರಲಿಲ್ಲ. 2 ನೇ ದಿನದ ನನ್ನ ಹೇಳಿಕೆಯಲ್ಲಿ ಆರೋಪಿ ಹೆಸರನ್ನು ಹೇಳಿದ್ದೇನೆ. ಸಾಕ್ಷಿ ಮರ್ಯಾದೆ ಹೋಗುತ್ತದೆ ಎಂದು ಮೊದಲನೇ ದಿನ ಆರೋಪಿಯ ಹೆಸರನ್ನು ಹೇಳಿರಲಿಲ್ಲ ಎಂದು ಸ್ವತಃ ಹೇಳುತ್ತಾರೆ. ನಾನು ಸಾಯುತ್ತೇನೆ ಎಂದು 2 ನೇ ಸಾರಿ ಹೇಳಿರುತ್ತಾರೆ. ನನ್ನ ಮುಂದುವರೆದ ಹೇಳಿಕೆಯಲ್ಲಿ ನಾನು ಆರೋಪಿಯ ಹೆಂಡತಿಯ ಕಷ್ಟ ಸುಖಕ್ಕೆ ಹಣಕಾಸಿನ ಸಹಾಯ ಮಾಡುತ್ತಿದ್ದೆ ಎಂದು ಆ ವಿಷಯ ಆರೋಪಿಗೆ ಗೊತ್ತಿತ್ತು ಎಂದು ಹೇಳಿದ್ದೇನೆ. ಆರೋಪಿಗೆ ಈ ವಿಷಯು ಗೊತ್ತಿತ್ತು ಎನ್ನುವ ಹೇಳಿಕೆಯನ್ನು ನ್ಯಾಯಾಧೀಶರ ಮುಂದಿನ ಹೇಳಿಕೆಯಲ್ಲಿ ಹೇಳಿದ್ದಿನೋ ಇಲ್ಲವೋ ಗೊತ್ತಿಲ್ಲ. ನಿಪಿ. 1 ಪ್ರಕಾರ ಹೇಳಿಕೆ ಕೊಡುವಾಗ ನಂತರ ಮುಂದುವರಿದ ಹೇಳಿಕೆ

ಕೊಡುವಾಗ ಹಾಗೂ ನಿಪಿ. 3 ರ ಪ್ರಕಾರ ನ್ಯಾಯಾಧೀಶರ ಮುಂದೆ ಹೇಳಿಕೆ ಕೊಡುವಾಗ ನನಗೆ ಪ್ರಜ್ಞೆ ಹಾಗೂ ಜ್ಞಾಪಕ ಇತ್ತು. ಪೊಲೀಸರ ಮುಂದಿನ ಹೇಳಿಕೆ ಯಲ್ಲಿ ಬಾಳೆ ತೋಟ ನೋಡಬೇಕು ಎಂದು ಆರೋಪಿ ಬಂದು ಹೇಲ್ಮೆಟ್ ತೆಗೆದು ನನ್ನ ಜೊತೆ ಮಾಡುತ್ತಾ ಎಂದು ಹೇಳಿದ್ದೇನೆ. ಆ ದಿನ ಚಾಸಾ 2 ಮತ್ತು 3 ರವರು ನನ್ನಿಂದ 100 ಮೀಟರ್ ಅಂತರದಲ್ಲಿ ಕೆಲಸ ಮಾಡುತ್ತಿದ್ದರು. ಬಾಳೆ ಬನದಲ್ಲಿ ಇದ್ದ ನಾವು ಅವರಿಗೆ ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮುಂದಿನ ನನ್ನ ಹೇಳಿಕೆಯಲ್ಲಿ ಆರೋಪಿ ಹೊಡೆದಾಗ ನಾನು ಕಿರುಚಿದ್ದರಿಂದ ಶಬ್ದ ಕೇಳಿ ಚಾಸಾ 2 ಮತ್ತು 3 ರವರು ಬಂದರೆ ಎಂದರೆ ನಿಜ. ಪೊಲೀಸರ ಮುಂದಿನ ನನ್ನ ಹೇಳಿಕೆಯಲ್ಲಿ ಚಾಸಾ 2 ಮತ್ತು 3 ರವರು ಸ್ಥಳಕ್ಕೆ ಓಡಿ ಬರುವುದನ್ನು ನೋಡಿ ಆರೋಪಿ ಮಚ್ಚನ್ನು ಸ್ಥಳದಲ್ಲಿಯೇ ಬೀಸಾಕಿ ಓಡಿ ಹೋದೆ ಎಂದು ಪೊಲೀಸರ ಮುಂದೆ ಹೇಳಿದ್ದೆನೆ. ನ್ಯಾಯಾಧೀಶರ ಮುಂದಿನ ನನ್ನ ಹೇಳಿಕೆಯಲ್ಲಿ ನಾನು ಕೆಳಗೆ ಬಿದ್ದು ಕಿರುಚಾಡುತ್ತಿದ್ದೆ ಎಂದು ಹೇಳಿದ್ದೇನೆ ಎಂದರೆ ಇರಬಹುದು. ಆರೋಪಿಯ ಮದುವೆಯಾದ ನಂತರ ನನ್ನ ಮದುವೆ ಆಗಿದೆ. ನಾನು ಆರೋಪಿಯ ಹೆಂಡತಿಯನ್ನು ಮದುವೆಯಾಗಲು ಇಷ್ಟ ಪಟ್ಟಿದ್ದೆ, ನನಗೆ ಆಸ್ತಿ ಇಲ್ಲ ಎಂದು ಅವರ ತಂದೆ ತಾಯಿ ಅವಳನ್ನು ನನಗೆ ಮದುವೆ ಮಾಡಿ ಕೊಡಲಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಆಸ್ತಿ ಇದ್ದುದ್ದರಿಂದ ಅವಳೊಂದಿಗೆ ಮದುವೆಯಾಯಿತು ಎನ್ನುವ ಕಾರಣಕ್ಕಾಗಿ ನನಗೆ ಆರೋಪಿಯ ಮೇಲೆ ದ್ವೇಷ ಇತ್ತು ಎಂದರೆ ಸರಿಯಲ್ಲ.

6. ನಾನು ಬಾಳೆ ಗೋಣೆಯಲ್ಲಿ ಮಾರಾಟ ಮಾಡಲು ವ್ಯವಹಾರ ಮಾಡಿಕೊಂಡ ನಂತರ ಬೇರೆಯವರು ಬಾಳೆ ಗೋಣೆ ನೋಡಲು ಬರುತ್ತಿದ್ದ ವಿಷಯ ತಿಳಿದು ವ್ಯವಹಾರ ಮಾಡಿಕೊಂಡವರು ನನ್ನೊಂದಿಗೆ ಜಗಳ ಮಾಡಿದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನಗೆ ಗಾಯಗಳಾಗಿದ್ದವು ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿಯೇ ನಾನು ನಿಪಿ. 1 ರಲ್ಲಿ

ಇಬ್ಬರು ವ್ಯಕ್ತಿಗಳು ಬಂದು ನನ್ನ ಮೇಲೆ ಹಲ್ಲೆ ಮಾಡಿದ್ದಾರೆ ಎಂದು ಹೇಳಿ ನಂತರ ಆರೋಪಿಯ ಮೇಲೆ ದ್ವೇಷ ಸಾಧಿಸಲು ಆರೋಪಿಯನ್ನು ಈ ಪ್ರಕರಣಕ್ಕೆ ಸೇರ್ಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಗೂ ಚಾಸಾ 2 ಕೂಡಿಕೊಂಡು ಕಥೆ ಕಟ್ಟಿ ಪ್ರಕರಣವನ್ನು ಆರೋಪಿಯ ವಿರುದ್ಧ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಯಾವುದೆ ಹಣಕಾಸಿನ ವ್ಯವಹಾರವನ್ನು ನಾನು ಆರೋಪಿಯ ಹೆಂಡತಿಯೊಂದಿಗೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನೊಂದಿಗೆ ಗಲಾಟೆ ಮಾಡಿದ ವ್ಯಕ್ತಿಗಳು ಅವರ ಮೇಲೆ ಪ್ರಕರಣ ದಾಖಲು ಮಾಡಿದರೆ ಪುನಃ ಗಲಾಟೆ ಮಾಡಬಹುದು ಎಂದು ಆರೋಪಿಯ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

7. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿ ಆ ದಿನ ಘಟನಾ ಸ್ಥಳಕ್ಕೆ ಬಂದಿಲ್ಲ ಯಾವುದೇ ಗಲಾಟೆ ಮಾಡಿಲ್ಲ ಎಂದರೆ ಸರಿಯಲ್ಲ. ಪೊಲೀಸರೊಂದಿಗೆ ಸಾಮಿಲಾಗಿ ನಡೆದ ಘಟನೆ ಮುಚ್ಚಿಡಲು ಸುಳ್ಳು ಪ್ರಕರಣ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನನಗೆ ಆದಂತಹ ಗಾಯಗಳಿಗೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

05.12.2023

(ಪ್ರಭಾವತಿ ಎಮ್ ಹಿರೇಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.